ದಿಃ 26.03.2026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 440/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕರಿಯಪ್ಪ | ಪ್ರಾ.ಸಾಃ 4 |
| ತಂದೆಯ/ಗಂಡನ ಹೆಸರು | : | ಕರಿಯಪ್ಪ | ಚಾಸಾಃ 6 |
| ವಯಸ್ಸು | : | 43 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ದುಮ್ಮಿ ಗೊಲ್ಲರಹಟ್ಟಿ ಗ್ರಾಮ | ದಿಃ26.03.2026 |

**(ನ್ಯಾಯಾಲಯದ ಆವರಣದಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ವಕೀಲರು ಮತ್ತು ಕಕಕ್ಷಿದಾರರನ್ನು ಹೊರತುಪಡಿಸಿ ಇತರೆ ಎಲ್ಲಾ ವಕೀಲರು ಮತ್ತು ಕಕ್ಷಿದಾರರನ್ನು ಹೊರಗೆ ಕಳುಹಿಸಿ ಸಾಕ್ಷ್ಯ ದಾಖಲಿಸಲಾಯಿತು.** )

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ನ್ಯಾಯಾಲಯದ ಮುಂದಿರುವ ಆರೋಪಿತರು ನಮ್ಮ ಸೋದರ ಸಂಬಂಧಿಕರು. ಚಾಸಾ.1 ನನ್ನ ಅಣ್ಣನ ಮಗನ ಪತ್ನಿ. ಚಾಸಾ.4 ನನ್ನ ಅಣ್ಣ, ಚಾಸಾ.5 ನನ್ನ ಅಣ್ಣನ ಮಗ, ಚಾಸಾ.7 ನನ್ನ ತಮ್ಮ. ಚಾಸಾ.2, 3 ಮತ್ತು 8 ರಿಂದ 10 ರವರು ನಮ್ಮ ಗ್ರಾಮದವರು.

2. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲ. ಆರೋಪಿತರು ನನಗಾಗಲೀ, ಚಾಸಾ.1, 4, 5 ಮತ್ತು 7 ರವರಿಗಾಗಲೀ ಯಾವುದೇ ತೊಂದರೆ ನೀಡಿಲ್ಲ. ಈ ಪ್ರಕರಣದ ಕುರಿತು ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

3. ದಿನಾಂಕ 14.06.2023 ರಂದು ಬೆಳಗ್ಗೆ 8.30 ರ ಸಮಯದಲ್ಲಿ ನಮ್ಮ ಗ್ರಾಮದ ನಮ್ಮ ಮನೆಯ ಖಾಲಿ ಜಾಗದ ಬಳಿ ರಸ್ತೆಯಲ್ಲಿ ಓಡಾಡುವ ಜಾಗದಲ್ಲಿ ಆರೋಪಿತರು ಕುರಿ ಶೆಡ್‌ನ್ನು ಕಟ್ಟಲು ಗುಂಡಿ ತೆಗೆಯುತ್ತಿದ್ದಾಗ, ನಾನು ಮತ್ತು ಚಾಸಾ.1, 4, 5 ಮತ್ತು 7 ರವರು ಕೇಳಿದ್ದಕ್ಕೆ, ಎಲ್ಲಾ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು, ಕೈಯಲ್ಲಿ ಆರೆ ಕೋಲನ್ನು ಹಿಡಿದುಕೊಂಡು ಬಂದು, ನನಗೆ ಮತ್ತು ಚಾಸಾ.1, 4 ಮತ್ತು 5 ರವರಿಗೆ ಅವಾಚ್ಯ ಶಬ್ಧಗಳಿಂದ

ದಿಃ 26.03.2026

ಬೈದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ.1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು, ಕೈ ಮತ್ತು ಕಾಲುಗಳಿಂದ ಹೊಡೆದು, ಚಾಸಾ.1 ರವರು ತೊಟ್ಟಿದ್ದ ನೈಟಿಯನ್ನು ಹಿಡಿದು ಎಳೆದಾಡಿ, ಎದೆಗೆ ಗುದ್ದಿ, ಮಾನಕ್ಕೆ ಚ್ಯುತಿಯನ್ನು ಉಂಟುಮಾಡಿದ್ದು, ಬಿಡಿಸಲು ಹೋದ ನನಗೆ 2 ನೇ ಆರೋಪಿ ಕೋಲಿನಿಂದ ಮೈಕೈಗೆ ಮತ್ತು ಬಲಬುಜಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ಆರೆ ಕೋಲಿನಿಂದ ನನ್ನ ಎಡಪಕ್ಕೆಗೆ ಮತ್ತು ಎದೆಗೆ ತಿವಿದಿದ್ದು, 4 ನೇ ಆರೋಪಿ ಚಾಸಾ.1 ಮತ್ತು ಚಾಸಾ.5 ಮತ್ತು ನನಗೆ ಕೈ ಮತ್ತು ಕಾಲುಗಳಿಂದ ಹೊಡೆದಿದ್ದು, ಬಿಡಿಸಲು ಬಂದ ಚಾಸಾ.7 ರವರಿಗೆ ಎಲ್ಲಾ ಆರೋಪಿತರು ಸೇರಿ ಕೈ ಮತ್ತು ಕಾಲುಗಳಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಆರೋಪಿ ಚಾಸಾ.7 ರವರ ಹಣೆಗೆ, ಎದೆಗೆ ಮತ್ತು ಹೊಟ್ಟೆಗೆ ಗುದ್ದಿದ್ದು, ಎಲ್ಲಾ ಆರೋಪಿತರು ನನಗೆ ಮತ್ತು ಚಾಸಾ.1, 4, 5 ಮತ್ತು 7 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 16.06.2023 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ.5 ಎಂದು ಗುರುತಿಸಲಾಯಿತು.

4. ನಾವು ಮತ್ತು ಆರೋಪಿತರು ಸೋದರ ಸಂಬಂಧಿಗಳಾಗಿದ್ದು, ನಮ್ಮಗಳ ನಡುವೆ ಎದುರು ದೂರುಗಳು ದಾಖಲಾಗಿದ್ದು, ಹಾಗಾಗಿ ನಾವು ಮತ್ತು ಆರೋಪಿತರು ಪರಸ್ಪರ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾವು ಮತ್ತು ಆರೋಪಿತರು ರಾಜೀ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇರುವುದಿಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ